<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 19212-2023

ಸಿಡಬ್ಲೂ - 1ಪಿಡಬ್ಲೂ-1

| | |
|---|---|
| ಸಾಕ್ಷಿದಾರರ ಹೆಸರು | : ಅವಿನಾಶ ಹೆಚ್ ಬಿ |
| ತಂದೆಯ ಹೆಸರು | : ಬಸವರಾಜು |
| ವಯಸ್ಸು | : 33 ವರ್ಷ |
| ಕೆಲಸ | : ಪಿ ಎಸ್ ಐ, ಚಾಮರಾಜಪೇಟೆ ಪೋ ಠಾ |
| ವಾಸ | : ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 16-01-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು 2022 ರಿಂದ 2024 ರವರೆಗೆ ಶೇಷಾದ್ರಿಪುರಂ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 28-03-2023 ರಂದು ಬೆಳಿಗ್ಗೆ ಸುಮಾರು 09.30 ಗಂಟೆಯ ಸಮಯದಲ್ಲಿ ನಾನು ಚಾಸಾ 5 ರಿಂದ 7 ರವರೊಂದಿಗೆ ಶಿರೂರು ಪಾರ್ಕ ರಸ್ತೆಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಶಿರೂರು ಪಾರ್ಕ ಆಟದ ಮೈದಾನದಲ್ಲಿ ಒಬ್ಬ ಆಸಾಮಿಯು ಗಾಂಜಾ ಮಾರುತ್ತಿರುವ ಬಗ್ಗೆ ಬಾತ್ಮಿಯು ಬಂದಿದ್ದು, ತಕ್ಷಣ ನಾನು ಆ ಬಗ್ಗೆ ದೂರನ್ನು ತಯಾರಿಸಿ ಚಾಸಾ 5 ರವರೊಂದಿಗೆ ದೂರನ್ನು ಠಾಣೆಗೆ ಕಳುಹಿಸಿ ಪ್ರಕರಣ ದಾಖಲಿಸಿರುತ್ತೇನೆ.

ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1ಎ ಎಂದು ಗುರುತಿಸಲಾಯಿತು. ನಂತರ ಶೋಧನೆ ಮಾಡಲು ಎಸಿಪಿ ಯವರಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2ಎ ಎಂದು ಗುರುತಿಸಲಾಯಿತು.

ನಂತರ ಇಬ್ಬರು ಪಂಚರನ್ನು ಕರೆಯಿಸಿ ನಂತರ ನಾವು ಅಂಗಶೋಧನೆಯನ್ನು ಮಾಡಿಕೊಂಡು, ಪಂಚರಿಗೆ ಮಾಹಿತಿಯನ್ನು ತಿಳಿಸಿ ಸದರಿ ಆರೋಪಿಯನ್ನು ತೋರಿಸುತ್ತಿರುವಾಗ ಆರೋಪಿಯು ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದರು. ಆಗ ಚಾಸಾ 5 ಮತ್ತು 7 ರವರು ಹೋಗಿ ಸದರಿ ಆಸಾಮಿಯನ್ನು ಹಿಡಿದುಕೊಂಡಿರುತ್ತಾರೆ. ನಂತರ ನಾವು ಅವರಿಗೆ ನಮ್ಮ ಗುರುತಿನ ಚೀಟಿಗಳನ್ನು ತೋರಿಸಿ ಪರಿಚಯ ಮಾಡಿಕೊಂಡು ನಂತರ ಸದರಿ ವ್ಯಕ್ತಿಯ ಮುಂದೆ ಪುನಃ ಅಂಗಶೋಧನೆಯನ್ನು ಮಾಡಿಕೊಂಡಿರುತ್ತೇವೆ. ನಂತರ ಸಮಯ 11.30 ರಿಂದ 12.15 ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇವೆ. ಆ ಸಮಯದಲ್ಲಿ ಸದರಿ ಆಸಾಮಿಯ ಬಳಿ 750 ಗ್ರಾಂ ಗಾಂಜಾ ಮತ್ತು 25 ಗ್ರಾಂ ಹೈಡ್ರಾ ಗಾಂಜಾ ಒಂದು ಪರ್ಪಲ್ ಕಲರ್ ಬ್ಯಾಗಿನಲ್ಲಿ ಇತ್ತು. ನಂತರ ನಾವು ಸದರಿ ಗಾಂಜಾವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ.

ಈ ದಿನ ತೆರೆದ ನ್ಯಾಯಾಲಯದಲ್ಲಿ ಪ್ಯಾಕ್ ನ್ನು ತೆರೆದು 2 ಗಾಂಜಾ ಪ್ಯಾಕೇಟ್ ಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ಪಂಚನಾಮೆ ಜರುಗಿಸುವ ಮೊದಲು ಪಂಚರಿಗೆ ನೋಟೀಸನ್ನು ನೀಡಿದ್ದೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3ಎ ಎಂದು ಗುರುತಿಸಲಾಯಿತು.

ಅದೇ ರೀತಿ ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4ಎ ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾದರಿ ಸೀಲಿನ ದಾಖಲೆಯನ್ನು ತೋರಿಸಲಾಗಿ

ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ.6ಎ ಎಂದು ಗುರುತಿಸಲಾಯಿತು.

ನಾನು ಸದರಿ ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ, ಈ ದಿನ 3 ನೇ ಆರೋಪಿ ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರು ಇರುವುದಿಲ್ಲ. ನಂತರ ಸದರಿ ಆಸಾಮಿ ಮತ್ತು ಮಾಲುಗಳ ಸಮೇತ ಠಾಣೆಗೆ ಬಂದು ಚಾಸಾ 2 ಮತ್ತು 3 ರವರ ಮತ್ತು ಸಿಬ್ಬಂದಿಯವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಎಸಿಪಿ ರವರಿಗೆ ವಿಶೇಷ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.7 ಎಂದು ಸಾಕ್ಷಿಯ ಸಹಿಯನ್ನು ನಿಪಿ.7ಎ ಎಂದು ಗುರುತಿಸಲಾಯಿತು.

ನಂತರ 3 ನೇ ಆರೋಪಿಯ ಸ್ವಇಚ್ಛೆ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿ. 10-04-2023 ರಂದು ನ್ಯಾಯಾಲಯದ ಮುಂದೆ ವಶಪಡಿಸಿಕೊಂಡ ಗಾಂಜಾವನ್ನು ಹಾಜರುಪಡಿಸಿ ಇನ್‌ವೆಂಟ್ರಿ ಮಾಡಿಸಿರುತ್ತೇನೆ. ದಿ. 19-04-2023 ರಂದು ಚಾಸಾ 9 ರವರ ಮೂಖಾಂತರ ಸದರಿ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ.

ದಿ. 12-06-2023 ರಂದು ರಾಸಾಯನಿಕ ವರದಿಯನ್ನು ಪಡೆದಿರುತ್ತೇನೆ. ದಿ. 17-06-2023 ರಂದು 2 ನೇ ಆರೋಪಿಯು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು ಠಾಣೆಗೆ ಹಾಜರಾಗಿರುತ್ತಾರೆ, ಅವರ ಹೇಳಿಕೆಯನ್ನು ಪಡೆದು, ಅದರ ಆಧಾರದ ಮೇರೆಗೆ 1 ನೇ ಆರೋಪಿಯ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿರುತ್ತೇನೆ.

ದಿ. 05-07-2023 ರಂದು 1 ನೇ ಆರೋಪಿಯ ವಿರುದ್ಧ ಯಾವುದೇ ಮಾಹಿತಿ ಸಿಗದೇ ಇದ್ದ ಕಾರಣ ಚಾಸಾ 7 ರವರ ವರದಿಯನ್ನು ಪಡೆದು ದಿ. 06-07-2023 ರಂದು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 12 ರವರಿಗೆ ವರ್ಗಾಯಿಸಿರುತ್ತೇನೆ.

ಸಾಕ್ಷಿಯು ಇನ್‌ವೆಂಟ್ರಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.8 ಮತ್ತು 9 ಎಂದು ಸಾಕ್ಷಿಯ ಸಹಿಯನ್ನು ನಿಪಿ.8ಎ ಮತ್ತು 9ಎ ಎಂದು ಗುರುತಿಸಲಾಯಿತು. ರಾಸಾಯನಿಕ ವರದಿಯನ್ನು ನಿಪಿ.10 ಎಂದು ಸಾಕ್ಷಿಯ ಸಹಿಯನ್ನು ನಿಪಿ.10ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ 7 ರವರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.11 ಎಂದು ಸಾಕ್ಷಿಯ ಸಹಿಯನ್ನು ನಿಪಿ.11ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಪಾಟೀ ಸವಾಲು ಆರೋಪಿತರ ಪರ ಶ್ರೀ ಆರ್ ಎಸ್ ವಕೀಲರು ಪಾಟೀ ಸವಾಲನ್ನು ಮಾಡಲು ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು)

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ